ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ : ಚಾವಿಸನಿನಿ/ಆ ಮತ್ತು ಮಾ.ಸಂ/02/ಎಂ.ಎಫ್-26/2022-23 / cys-725 ದಿನಾಂಕ: 04 AUG 2022

## ಸುತ್ತೋಲೆ

**ವಿಷಯ:** ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನಲೆಯಲ್ಲಿ **"ಹರ್ ಘರ್ ತಿರಂಗಾ"** ಅಭಿಯಾನ ಕಾರ್ಯಕ್ರಮವನ್ನು ಅನುಷ್ಠಾನಗೊಳಸುವ ಕುರಿತು.

**ಉಲ್ಲೇಖ:** ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇಂಧನ ಇಲಾಖೆಯ ರವರ ಪತ್ರ ದಿನಾಂಕ: 12.06.2022 ಮತ್ತು 08.07.2022.

******

ದೇಶಾದ್ಯಂತ ಭಾರತ ಸ್ವಾತಂತ್ರ್ಯದ 75ರ ಸಂಭ್ರಮವನ್ನು ವೈವಿಧ್ಯಮಯವಾಗಿ ಆಚರಿಸಲಾಗುತ್ತಿದೆ. ಈ ಸಂಭ್ರಮದ ಒಂದು ಭಾಗವಾಗಿ ಕೇಂದ್ರ ಸರ್ಕಾರವು **"ಹರ್ ಘರ್ ತಿರಂಗಾ"** ಎಂಬ ಘೋಷವಾಕ್ಯದೊಂದಿಗೆ 2022 ರ ಆಗಸ್ಟ್ 13 ರಿಂದ 15ರವರೆಗೆ ದೇಶದ ಪ್ರತಿ ಮನೆ-ಮನೆಯಲ್ಲೂ ರಾಷ್ಟ್ರ ಧ್ವಜವನ್ನು ಹಾರಿಸಿ ದೇಶಭಕ್ತಿ ಬಿಂಬಿಸುವ ಮೂಲಕ ನಮ್ಮ ರಾಷ್ಟ್ರ ಪ್ರೇಮವನ್ನು ಅಭಿವ್ಯಕ್ತಗೊಳಿಸಿ ದಾಖಲಿಸುವಂತೆ ಕರೆ ನೀಡಿ ಅಭಿಯಾನ ಹಮ್ಮಿಕೊಂಡಿದೆ. ಈ ಸಂಬಂಧ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ರವರು ಉಲ್ಲೇಖದ ಪತ್ರಗಳಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಮನೆ-ಮನೆಯಲ್ಲೂ ರಾಷ್ಟ್ರಧ್ವಜ ಕಾರ್ಯಕ್ರಮವನ್ನು ಅನುಷ್ಠಾನಗೊಳಸಲು ಸೂಚಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಚಾವಿಸನಿನಿಯ ಎಲ್ಲಾ ಕಛೇರಿಗಳು, ಉಪಕೇಂದ್ರಗಳು ಹಾಗೂ ಚಾವಿಸನಿನಿಯ ಎಲ್ಲಾ ಅಧಿಕಾರಿಗಳು/ನೌಕರರು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ "ಹರ್ ಘರ್ ತಿರಂಗಾ" ಅಭಿಯಾನ ಕಾರ್ಯಕ್ರಮವನ್ನು ಅನುಷ್ಠಾನಗೊಳಸಲು ಈ ಕೆಳಕಂಡಂತೆ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

1. ಚಾವಿಸನಿನಿಯ ಎಲ್ಲಾ ಕಛೇರಿಗಳು, ಉಪಕೇಂದ್ರಗಳ ನಿಯಂತ್ರಣ ಕಟ್ಟಡಗಳು, ಅತಿಥಿ ಗೃಹಗಳು ಹಾಗೂ ಇತರೆ ಕಟ್ಟಡಗಳ ಮೇಲೆ ದಿನಾಂಕ: 13.08.2022 ರಿಂದ 15.08.2022 ರಾಷ್ಟರ ಧ್ವಜವನ್ನು ಹಾರಿಸಲು ಸೂಚಿಸಿದೆ.
2. ನಿಗಮದ ಎಲ್ಲಾ ಕಛೇರಿ/ಉಪಕೇಂದ್ರಗಳ ನಿಯಂತ್ರಣ ಕಟ್ಟಡಗಳು ಗೃಹಗಳ/ಇತರೆ ಕಟ್ಟಡಗಳ ಮೇಲೆ/ಮುಂದೆ ಧ್ವಜ ಸ್ಥಂಭವನ್ನು ಅಳವಡಿಸದಿದ್ದಲ್ಲಿ ಸೂಕ್ತ ಧ್ವಜ ಸ್ಥಂಭವನ್ನು ಅಳವಡಿಸಿ **The Flag Code of India 2002(as amended in 2021)** ರಲ್ಲಿ ನಿಗಧಿಪಡಿಸಿರುವ 5 ಅಥವಾ 6ನೇ ಧ್ವಜ ಸಂಖ್ಯೆಯ ಅಳತೆಯ ರಾಷ್ಟ್ರ ಧ್ವಜವನ್ನು ಕಡ್ಡಾಯವಾಗಿ ಹಾರಿಸಲು ಕ್ರಮಕೈಗೊಳ್ಳುವುದು. **The Flag Code of India 2002(as amended in 2021)** ರಲ್ಲಿ ನೀಡಿರುವ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
3. ರಾಜ್ಯಾದ್ಯಂತ ಇರುವ ಚಾವಿಸನಿನಿಯ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ಎಲ್ಲಾ ಚಾವಿಸನಿನಿಯ ಅಧಿಕಾರಿಗಳು/ನೌಕರರುಗಳಿಗೆ ತಮ್ಮ ಕುಟುಂಬ ವರ್ಗದವರೊಂದಿಗೆ "ಹರ್ ಘರ್ ತಿರಂಗಾ" ಅಭಿಯಾನದಂತೆ ವಸತಿ ಗೃಹದ ಮೇಲೆ/ಅಂಗಳದಲ್ಲ ರಾಷ್ಟ್ರ ಪ್ರೇಮವನ್ನು ಅಭಿವ್ಯಕ್ತಗೊಳಸಲು ಸೂಚಿಸಿದೆ.
4. ಎಲ್ಲಾ ಚಾವಿಸನಿನಿ ಅಧಿಕಾರಿಗಳು/ನೌಕರರುಗಳಿಗೆ ತಮ್ಮ ತಮ್ಮ ಮನೆಯ ಮೇಲೆ/ಮನೆಯ ಅಂಗಳದಲ್ಲಿ ಕುಟುಂಬ ವರ್ಗ ಮತ್ತು ನೆರೆಹೊರೆಯವರನ್ನು ಸೇರಿಸಿ ಸ್ವತಃ ತಾವೆ ಮುಂದಾಳತ್ವ ವಹಿಸಿ **"ಹರ್ ಘರ್ ತಿರಂಗಾ"** ಅಭಿಯಾನ ಅನುಷ್ಠಾನಗೊಳಸುವಂತೆ ಸೂಚಿಸುವುದು.
5. ಭಾರತ ಸರ್ಕಾರದ ಗೃಹ ವ್ಯವಹಾರಗಳ ಮಂತ್ರಾಲಯವು . **The Flag Code of India 2002(as amended in 2021)** ಗೆ ತಿದ್ದುಪಡಿಯನ್ನು ತರಲಾಗಿದ್ದು, ಕೈಯಲ್ಲಿ ತಯಾರಿಸಿದ ರಾಷ್ಟ್ರೀಯ ಧ್ವಜ ಅಥವಾ ಯಂತ್ರದಿಂದ ತಯಾರಿಸಿದ ಪಾಲಿಸ್ಟರ್, ಹತ್ತಿ, ಉಣ್ಣೆ, ರೇಷ್ಮೆ, ಖಾದಿ ಬಟ್ಟೆಯಿಂದ ತಯಾರಿಸುವ ರಾಷ್ಟ್ರ ಧ್ವಜವನ್ನು ಹಾರಿಸಬಹುದಾಗಿದೆ.

ಮು.ತಿ.ನೋ.....

6. **Government e market place(GeM)** ಜಾಲತಾಣದಲ್ಲಿ/ಕರ್ನಾಟಕ ಸರ್ಕಾರದ ಅಧಿಕೃತ ಮಾರಾಟ ಕೇಂದ್ರಗಳಲ್ಲಿ ರಾಷ್ಟ್ರಧ್ವಜ ಲಭ್ಯವಿದ್ದು, ಎಲ್ಲಾ ಅಧಿಕಾರಿಗಳು/ನೌಕರರುಗಳಿಗೆ ರಾಷ್ಟ್ರಧ್ವಜವನ್ನು ಖರೀದಿಸಿ ದಿನಾಂಕ: 13.08.2022 ರಿಂದ 15.08.2022 ರವರೆಗೆ "ಹರ್ ಘರ್ ತಿರಂಗಾ" ಅಭಿಯಾನದಲ್ಲಿ ಪಾಲ್ಗೊಂಡು ರಾಷ್ಟ್ರಪ್ರೇಮವನ್ನು ಅಭಿವ್ಯಕ್ತಗೊಳಿಸುವಂತೆ ಪ್ರೇರೆಪಿಸಲು ಸೂಚಿಸಿದೆ.
7. **ನಿಗಮದ ಎಲ್ಲಾ ಕಛೇರಿಗಳ ಮುಖ್ಯಸ್ಥರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ನಿಗಮದ ಕಟ್ಟಡಗಳಲ್ಲಿ ದಿನಾಂಕ:13.08.2022 ರಿಂದ 15.08.2022ರವರೆಗೆ "ಹರ್ ಘರ್ ತಿರಂಗಾ"** ಅಭಿಯಾನದಲ್ಲಿ ಕುರಿತು ಕೈಗೊಂಡ ಕ್ರಮದ ಬಗ್ಗೆ ಉತ್ತಮ ಗುಣಮಟ್ಟದ ಛಾಯಾಚಿತ್ರ/ವಿಡಿಯೋಗಳೊಂದಿಗೆ ಅನುಪಾಲನಾ ವರದಿಯನ್ನು ನಿಗಮ ಕಛೇರಿಯಲ್ಲಿ ದಾಖಲಿಸಿಕೊಳ್ಳುವಂತೆ ಸೂಚಿಸಿದೆ.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ
ಅನುಮೋದಿಸಲ್ಪಟ್ಟಿರುತ್ತದೆ.

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)
ಚಾವಿಸನಿನಿ., ಮೈಸೂರು.

**ಪ್ರತಿಗಳು:**

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ). ಚಾವಿಸನಿನಿ, ಮೈಸೂರು.
2. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
3. ಪ್ರಧಾನ ವ್ಯವಸ್ಥಾಪಕರು, ತಾಂತ್ರಿಕ/ವಾಣಿಜ್ಯ/ಖರೀದಿ/ಯೋಜನೆಗಳು/ಲೆಕ್ಕ ಮತ್ತು ಕಂದಾಯ/ಬಿ&ಆರ್/ಆ &ಮಾಸಂ/ ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ,.
5. ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ
6. ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್. ಶಾಖೆ,) ನಿಗಮ ಕಛೇರಿ, ನಿಗಮದ ವೆಬ್‌ಸೆಟ್ ನಲ್ಲಿ ಪ್ರಕಟಿಸಲು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ,
8. ಎಲ್ಲಾ ಲೆಕ್ಕಾಧಿಕಾರಿ(ಆಂ.ಪ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ,
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಉಪವಿಭಾಗ, ಚಾವಿಸನಿನಿರವರು ತಮ್ಮ ಅಧೀನ ಕಛೇರಿಗಳಿಗೆ ಮಾಹಿತಿ ನೀಡಿ **ಪ್ರತಿ ಮನೆ-ಮನೆಯಲ್ಲೂ ರಾಷ್ಟ್ರ ಧ್ವಜ ವನ್ನು ಹಾರಿಸಿ ದೇಶ ಭಕ್ತಿ ಬಿಂಬಿಸುವ ಮೂಲಕ** ಈ ಅಭಿಯಾನ ಕಾರ್ಯಕ್ರಮವನ್ನು ನಿರ್ವಹಿಸಲು ಕ್ರಮವಹಿಸುವುದು.
10. ಎಲ್ಲಾ ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ ಶಾಖೆ, ಚಾವಿಸನಿನಿ.
11. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿರವರುಗಳ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತ, ಸುತ್ತೋಲೆಯ ಮಾಹಿತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ತಾಂತ್ರಿಕ)/ಮುಖ್ಯ ಆರ್ಥಿಕ ಅಧಿಕಾರಿಯವರ ಗಮನಕ್ಕೆ ತರುವಂತೆ ಕೋರಿದೆ.
12. ಉಪಾಧ್ಯಕ್ಷರು, ಚಾವಿಸನಿನಿ, ನೌಕರರ ಸಂಘ, ರಿ(659), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
13. ಉಪಾಧ್ಯಕ್ಷರು, ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗಗಳ ಕಲ್ಯಾಣ ಸಂಸ್ಥೆ, (ರಿ.), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
14. ಉಪಾಧ್ಯಕ್ಷರು, ಡಿಪ್ಲೋಮ, ಇಂಜಿನಿಯರ್‌ಗಳ ಸಂಘ, ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
15. ಉಪಾಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಕಡಕೊಳ, ಮೈಸೂರು.
16. ಕಾರ್ಯದರ್ಶಿ, ಚಾವಿಸನಿನಿ, ಲೆಕ್ಕಾಧಿಕಾರಿಗಳ ಸಂಘ, ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
17. ವ್ಯ-1/ಪ್ರ.ಕ.